ಅವನ ಕೃತಿ ಶೂನ್ಯತೆಯು ಅವನಿಗೆ ಪೂರ್ಣ ಪರಿಪ್ರೇಕ್ಷ್ಯವನ್ನು ನೀಡುತ್ತದೆ. ಅವನ ಕನಸುಗಳೂ ದಿವ್ಯ–ಭವ್ಯ. ಹೀಗಾಗಿ ಅವನು ಆಗಾಗ ತೃತೀಯ ಪುರುಷದಲ್ಲಿ ಮಾತಾಡುತ್ತಾನೆ. ಚಿಕ್ಕ ಬಾಲಕನಂತೆ ಇದು ಸ್ವಉದಾತ್ತೀಕರಣದ ಭಾಗ. ಇದು ಕಥನಾತ್ಮಕ ದೃಷ್ಟಿಕೋನವಾಗಿದೆ. ಇದರಿಂದ ಕಥೆಗೆ ಮೂರನೇ ಆಯಾಮದ ಮೌಲಿಕತೆ ಲಭಿಸುತ್ತದೆ. 'ದ ಡಾಗ್'ನಲ್ಲಿ ನಾಯಿಯ ಭೂಮಿಕೆಯಲ್ಲಿ ಇಂಥ ಬಗೆಯ ಮೂರು ಪರಿಪ್ರೇಕ್ಷ್ಯಗಳಿವೆ. ನಾಯಿಯೂ ಈ ಕಥಾನಕದ ವಕ್ರಬಿಂದುವಾಗಿದೆ.

◆ ನಿಮ್ಮ ಅಭಿರುಚಿ, ನಿಮ್ಮ ವಿಷಯದ ಆಯ್ಕೆ, ನಿಮ್ಮ ಕಥನಶೈಲಿಯು ಕಳೆದ ಹಲವು ವರ್ಷಗಳಿಂದ ಹೇಗೆ ಬದಲಾಯಿತು?

ನನ್ನ ಮೊದಲ ಮೂರು ಕಾದಂಬರಿಗಳಾದ 'ದ ಟಿನ್ ಡ್ರಮ್', 'ಡಾಗ್ ಇಯರ್ಸ್' ಮತ್ತು 'ಕ್ಯಾಟ್ ಅಂಡ್ ಮೌಸ್' 60ರ ದಶಕದ್ದು. ಎರಡನೇ ಜಾಗತಿಕ ಯುದ್ಧದ ಜರ್ಮನ್ ಅನುಭವವು ಕೇಂದ್ರಸ್ಥಾನದಲ್ಲಿದೆ. ನಾಜಿ ಕಾಲಘಟ್ಟದ ಕಾರಣಗಳು ಮತ್ತು ಅದರ ಭೀಕರ ಪ್ರತಿಕ್ರಿಯೆಯನ್ನು ಬರೆಯದ ಹೊರತು ನೆಮ್ಮದಿಯೆನಿಸಲಿಲ್ಲ. ಅನಂತರ ಬರೆದ 'ಫ್ರಮ್ ದ ಡೈರಿ' ಸಹ ಯುದ್ಧಕ್ಕೆ ಸಂಬಂಧಿಸಿದ್ದೇ. ಇದರ ಗದ್ಯಶೈಲಿ, ಸ್ವರೂಪ ತೀರ ಭಿನ್ನ. 1939ರ ಜರ್ಮನಿಯು ವರ್ತಮಾನದ್ದು ಮತ್ತು ಮೂರನೇ ಕಾಲಘಟ್ಟವು ಭವಿಷ್ಯದ ಕಡೆಗೆ ಹೋಗುವಂತಹದು. ಮೊದಲನೇ ಕಾಲಘಟ್ಟವು ಎರಡನೇ ಮಹಾಯುದ್ಧದ್ದು. ನಾನು ಭವಿಷ್ಯದ ಬಗೆಗೆ ಯೋಚಿಸುವಾಗ ನನ್ನ ಗತ ಇತಿಹಾಸದ ಜ್ಞಾನ, ಗತ ಅನುಭವ ಮತ್ತು ವರ್ತಮಾನದ ಪ್ರಜ್ಞೆ ಸದಾ ನನ್ನ ಜೊತೆಯಲ್ಲಿರುತ್ತದೆ. ಭವಿಷ್ಯದ ಬಗೆಗೆ ಯೋಚಿಸುವಾಗ ಇದೆಲ್ಲ ಉಪಯೋಗಕ್ಕೆ ಬರುತ್ತದೆ. ಹೀಗಾಗಿ ನಿನ್ನೆ ಬರೆದ ವಾಕ್ಯಗಳಿಗೆ ವರ್ತಮಾನದ ಮೌಲ್ಯ, ಭವಿಷ್ಯದ ಪರಿಮಾಣ ಲಭಿಸುತ್ತದೆ. ಸೃಜನಶೀಲ ಲೇಖಕ ತನ್ನ ಪ್ರಜ್ಞೆಯಲ್ಲಿ ಆಗುವ ಭೂತ ಭವಿಷ್ಯ ವರ್ತಮಾನಗಳ ಸಮ್ಮಿಶ್ರಣ, ಅವುಗಳ ದೊಡ್ಡ ಭಿತ್ತಿ ಮತ್ತು ಅದನ್ನು ಅಭಿವ್ಯಕ್ತಗೊಳಿಸುವ ರೀತಿಯನ್ನು ಅರಿಯಬೇಕಾದ ಅಗತ್ಯವಿದೆ. ಈ ವರ್ತಮಾನ ಹಾಗೂ ತತ್ಕಾಲೀನ ಐಹಿಕ ವಿಷಯಗಳಿಗೆ ನನ್ನ ಪುಸ್ತಕದಲ್ಲಿ ತುಂಬ ಮಹತ್ವದ ಸ್ಥಾನವಿದೆ. ಕಾಲದ ದೊಡ್ಡ ಭಿತ್ತಿಯು 'ದ ಫ್ಲೌಂಡರ್' ಕಾದಂಬರಿಯಲ್ಲೂ ಬಂದಿದೆ. ಇಲ್ಲಿ ನಿವೇದಕನೇ ಕಾಲದ ವಿವಿಧ ರೂಪ ಧರಿಸಿ ಬರುವುದರಿಂದ ಅದಕ್ಕೆ ಹೊಸ ಪರಿಮಾಣ ಪ್ರಾಪ್ತವಾಗಿದೆ. ಕಾದಂಬರಿಯಲ್ಲಿ ಪ್ರಯೋಗಕ್ಕೆ ಸಾಕಷ್ಟು ಅವಕಾಶವಿದೆ.

◆ 'ಫ್ರಾಮ್ ದ ಡೈರಿ...'ಯಲ್ಲಿ ಸಮಕಾಲೀನ ರಾಜಕಾರಣ ಮತ್ತು ಎರಡನೇ ಮಹಾಯುದ್ಧದಲ್ಲಿ ಜ್ಯೂ ಜನಾಂಗದವರ ಮೇಲಾದ ಅತ್ಯಾಚಾರದ ಮಿಶ್ರಣವಿದೆ. 1939ರಲ್ಲಿ ಮಾಡಿದ ಪ್ರಚಾರ ಭಾಷಣವು ನಿಮಗೇನಾದರೂ ಉಪಯೋಗಕ್ಕೆ ಬಂತೇ?

ಜರ್ಮನ್ ಚರಿತ್ರೆಯ, ಈ ನನ್ನ ಬಾಲ್ಯ ಕಾಲದ ಯುದ್ಧದ ಕಾಲಘಟ್ಟವು ನನ್ನ ತಲೆಯೊಳಗೆ ದಟ್ಟವಾಗಿ ತುಂಬಿಕೊಂಡಿದೆ. ನನ್ನಂಥ ಹಲವು ಲೇಖಕರನ್ನು ಈ ಅನುಭವವು ಮುತ್ತಿಕೊಂಡಿದೆ. ನನಗಂತೂ ಬೇರೆ ಪರ್ಯಾಯವೇ ಇರಲಿಲ್ಲ. 60–70ರ ರಾಜಕೀಯ ಧುರೀಣರಿಗೆ ಭೂತಕಾಲದ ಬಗೆಗೆ ಮಾತಾಡಿದ್ದು ಇಷ್ಟವಾಗುವುದಿಲ್ಲ. ಮಾತಾಡಿದರೆ ಅವರು ಪ್ರಾಚೀನ ಕಾಲದ ರಾಕ್ಷಸರ ಬಗೆಗೆ ಮಾತಾಡುತ್ತಾರೆ. ಈ ರಾಕ್ಷಸರೆಂದರೆ ಇಂದಿನ ಜರ್ಮನ್. ಅವರು ಸುಳ್ಳು ಸುಳ್ಳೇ ಹೇಳುತ್ತಿದ್ದರು. ಯುವ ಪೀಳಿಗೆಗೆ ಇದನ್ನೆಲ್ಲ ತಿಳಿಸಬೇಕಿತ್ತು. ಹಾಡಹಗಲಲ್ಲೇ ಅತ್ಯಂತ ನಿಧಾನವಾಗಿ ವ್ಯವಸ್ಥಿತವಾಗಿ ಅದನ್ನೆಲ್ಲ ಮಾಡಿದರು. ನಲವತ್ತು ವರ್ಷಗಳ ನಂತರ ಸಂಘ ಗಣರಾಜ್ಯ ಸ್ಥಾಪನೆಯಾದಂದಿನಿಂದ, ಇದೆಲ್ಲದರ ಬಗೆಗೆ, ನಾಜಿ ಕಾಲಘಟ್ಟದ ಬಗೆಗೆ ನಾವು ಬಹಿರಂಗವಾಗಿ ಮಾತಾಡುವುದು